ವಿಷಯ :– ಹಾಸನ ಕ್ಷೇತ್ರದಲ್ಲಿರುವ ಕೆರೆಗಳ ದುರಸ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 6 (159)

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಕ್ಷೇತ್ರದ ಶಾಂತಿ ಗ್ರಾಮ, ಕಟ್ಟಾಯ ಮತ್ತು ಕಸಬಾ ಹೋಬಳಿಗಳ ಯಾವ ಯಾವ ಊರಿನ ಕೆರೆಗಳನ್ನು ದುರಸ್ತಿ ಮಾಡಲು ಕಳೆದ ಮೂರು ವರ್ಷಗಳಿಂದ ಖರ್ಚು ಮಾಡಿದ ಮೊತ್ತ ಎಷ್ಟು ?

ಆ) ಈ ಕೆರೆಗಳನ್ನು ಯಾವ ಯಾವ ಯೋಜನೆಯಡಿಯಲ್ಲಿ ದುರಸ್ತಿ ಮಾಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) ಹಾಸನ ಕ್ಷೇತ್ರದ ಶಾಂತಿ ಗ್ರಾಮ, ಕಟ್ಟಾಯ, ಮತ್ತು ಕಸಬಾ ಹೋಬಳಿಗಳ ಊರಿನ 72 ಕೆರೆಗಳನ್ನು ದುರಸ್ತಿ ಮಾಡಲು ಕಳೆದ ಮೂರು ವರ್ಷಗಳಿಂದ ರೂ. 9.181 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. (ವಿವರಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.)

ಆ) ಈ ಕೆರೆಗಳ ದುರಸ್ತಿಯನ್ನು 2702 ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆ.

ಹಾಸನ ಕ್ಷೇತ್ರ ಶಾಂತಿ ಗ್ರಾಮ, ಕಟ್ಟಾಯ ಮತ್ತು ಕಸಬಾ ಹೋಬಳಿಗಳಲ್ಲಿ ದುರಸ್ತಿಗೆ ತೆಗೆದುಕೊಂಡ ಕೆರೆಗಳ ಮಾಹಿತಿ

ಕ್ರ. ಸಂ.	ಹೋಬಳಿ ಹೆಸರು	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ)	ಒಟ್ಟು ಖರ್ಚು (ಲಕ್ಷ ರೂ. ಗಳಲ್ಲಿ)	ಲೆಕ್ಕ ಶೀರ್ಷಿಕೆ
1	2	3	4	5	6
1	ಶಾಂತಿ ಗ್ರಾಮ	ದುಮ್ಮಿಗೆರೆ ಗೋಣಿಮರದ ಕಟ್ಟಿಗೆ ಕೋಡಿ ಸುತ್ತ ಏರಿ ಕೆಲಸ	0.24	0.114	2702 ಯೋಜನೇತರ
2	,,	ಹಂಚಿಹಳ್ಳಿ ಊರಮುಂದಿನ ಕೆರೆಗೆ ಗೈಡ್‌ವೆಲ್ ನಿರ್ಮಾಣ	0.20	0.148	,,
3	,,	ದುಮ್ಮಿಗೆರೆ ಕಲ್ಲುಕೆರೆ ಕೋಡಿ ಹಳ್ಳಕ್ಕೆ ಮೋರಿ ನಿರ್ಮಾಣ	0.23	0.267	,,
4	,,	ಮುತ್ತಿಗೆ ದೊಡ್ಡ ಕೆರೆ ಕೋಡಿ ನಾಲೆಗೆ ಫೈನ್ (ಕ್ಯಾಸಿಂಗ್ ತೂಬುನಾಲೆ ರಿಪೇರಿ)	0.14	0.023	,,
5	,,	ಕೆಂಚನಹಳ್ಳಿ ಪಡವಲಕೆರೆ ಅಕ್ಕಿಡಕ್ಟ್ ನಿರ್ಮಾಣ ಕೆಲಸ	0.18	0.153	,,
6	,,	ಅಮ್ಮಗೋಡನಹಳ್ಳಿ ಮೇಗಲ ಕಟ್ಟೆ ರಿಪೇರಿ	0.24	0.196	,,
7	,,	ಹಲಸಿನಹಳ್ಳಿ ಹೊಸಕೆರೆ ದುರಸ್ತಿ	0.20	0.100	,,
8	,,	ಸಾತೇನಹಳ್ಳಿ ಹೊಸಕೆರೆ ದುರಸ್ತಿ	0.22	0.010	,,
9	,,	ಬೀಜಮಾರನಹಳ್ಳಿ ದೊಡ್ಡಕೆರೆ ದುರಸ್ತಿ	0.22	0.015	,,
10	,,	ಕಲ್ಲೇನಹಳ್ಳಿ ಫಿಕ್‌ಅಪ್ ದುರಸ್ತಿ	0.20	0.016	,,
11	,,	ರಂಗನಾಥಪುರ ಚೌಳಿಕಟ್ಟೆ ದುರಸ್ತಿ	0.23	0.072	,,
12	,,	ಅಪ್ಪಿಹಳ್ಳಿ ನಟ್ಟಿಕಟ್ಟೆ ಕೋಡಿ ನಾಲೆದುರಸ್ತಿ	0.20	0.028	,,
13	,,	ಹಾಲೇನಹಳ್ಳಿ ಕೆರೆ ದುರಸ್ತಿ	0.245	0.024	,,
28	ಕಟ್ಟಾಯ	ವಿರೂಪನಹಳ್ಳಿ ದೊಡ್ಡ ಕೆರೆಯ ತೂಬಿನ ನಿರ್ಮಾಣ	0.10	0.025	,,
29	,,	ಲಕ್ಕನಾಯಕನಹಳ್ಳಿ ಕೆರೆ ದುರಸ್ತಿ	0.250	0.117	,,

1	2	3	4	5	6
30	ಕಟ್ಟಾಯ	ಹೊನ್ನೇನಹಳ್ಳಿ ವೀರಕೆಟ್ಟಿಹಳ್ಳಿ ಕೆರೆ ದುರಸ್ತಿ	0.226	0.215	2702 ಯೋಜನೇತರ
31	,,	ಮಣಚನಹಳ್ಳಿ ಅಗಲಕಟ್ಟಿ ದುರಸ್ತಿ	0.250	0.25	,,
32	,,	ದುಂಡನಾಯ್ಕನಹಳ್ಳಿ ಚಿಗಳ್ಳಿಕಟ್ಟೆ ಕೋಡಿ ರಿಪೇರಿ	0.25	0.064	,,
33	,,	ಕಲ್ಲುದೇವರಹಳ್ಳಿ ಗಟ್ಟಿ ರಿಪೇರಿ	0.128	0.054	,,
34	,,	ಬಿನ್ನೇನಹಳ್ಳಿ ದೊಡ್ಡಕೆರೆ ದುರಸ್ತಿ	0.18	0.123	,,
35	,,	ದುಂಡನಾಯ್ಕನಹಳ್ಳಿ ಬಿಗಡಿಕಟ್ಟೆ ಕೆರೆ ದುರಸ್ತಿ	0.195	0.063	,,
36	,,	ಕಿತ್ತಾನೆ ದೊಡ್ಡಕೆರೆ ಏರಿ ರಿಪೇರಿ	0.220	0.024	,,
37	,,	ಮಲ್ಲಿಗೆವಾಳು ಕೆರೆಯ ತೂಬು ಮತ್ತು ಏರಿ ರಿಪೇರಿ	0.18	0.171	,,
38	,,	ಓರಿಗೌಡನಹಳ್ಳಿ ಕೆರೆ ಕೋಡಿ ಕಾಲುವೆ ದುರಸ್ತಿ	0.235	0.20	,,
39	,,	ಕಬ್ಬಕ್ಕಿಯಲ್ಲಿ ಕೆರೆ ತೂಬು ರಿಪೇರಿ	0.25	0.038	,,
40	,,	ಲಕ್ಕನಹಳ್ಳಿ ಕೆರೆ ಏರಿ ದುರಸ್ತಿ	0.22	0.132	,,
41	ಕಸಬಾ	ಕಂಡಲಿ ದೊಡ್ಡ ಕೆರೆಯ ಅಭಿವೃದ್ಧಿ	0.54	0.342	4702 ಎಂ.ಐ.ಪ್ಲಾನ್
42	,,	ಅಲವಾಗಿ ದೊಡ್ಡ ಕೆರೆ ತೂಬು ಕಾಲುವೆಗೆ ಕಲ್ಲು ಕಟ್ಟಡ ನಿರ್ಮಾಣ	0.20	0.017	2702 ಯೋಜನೇತರ
43	ಕಸಬಾ	ಹಿಂದಿನಕೆರೆ ದೊಡ್ಡಕೆರೆ ತೂಬು ಕಾಲುವೆ ಅಭಿವೃದ್ಧಿ	0.245	0.16	2702 ಯೋಜನೇತರ
44	,,	ಹಿಂದಿನ ಕೆರೆಯ ಊರು ಮುಂದಿನ ಕೆರೆಯ ತೂಬು ಪುನರ್ ನಿರ್ಮಾಣ ಮತ್ತು ಏರಿ ಅಭಿವೃದ್ಧಿ	9.23	0.167	,,
45	ಕಸಬಾ	ಕೋರಹಳ್ಳಿ ಕೆರೆ ಕೋಡಿಯ ಪುನರ್ ನಿರ್ಮಾಣ	0.260	0.036	,,
46	,,	,, ಪಕ್ಕದ ತೂಬಿನ ಪುನರ್ ನಿರ್ಮಾಣ	0.249	0.21	,,
47	,,	,, ಮಧ್ಯಭಾಗದ ,,	0.239	0.130	,,
48	,,	,, 3 ನೇ ತೂಬಿನ ,,	0.245	0.304	,,
49	,,	ಅಗಲಹಳ್ಳಿ ಕೊತ್ತನಕಟ್ಟೆ ಏರಿ ಅಭಿವೃದ್ಧಿ ಭಾಗ—1	0.240	0.237	,,
50	,,	,, ಭಾಗ—2	0.248	0.033	,,
51	,,	ತಾವರದೇವರ ಕೊಪ್ಪಲು ಮುಗ್ಗನಹಳ್ಳಿ ಕೆರೆಗೆ ಸೋಪಾನಕಟ್ಟೆ ನಿರ್ಮಾಣ	0.230	0.096	,,
52	,,	ಮಾವನಹಳ್ಳಿ ಕೆರೆ ದುರಸ್ತಿ	0.218	0.067	,,
53	,,	ಸಂಕಲಾಪುರ ಕೆರೆ ಏರಿ ದುರಸ್ತಿ	0.20	0.158	,,
54	,,	ನಿಡೂರಿಪುರದ ಕೆರೆಯ ಬಲ ತೂಬಿನ ರಿಪೇರಿ	0.21	0.283	,,
55	,,	ಅಗಲಹಳ್ಳಿ ಬಾಚನಕಟ್ಟೆ ರಿಪೇರಿ	0.230	0.158	,,
56	,,	ಬೂವನಹಳ್ಳಿ ಮೇಗಲಕಟ್ಟೆ ರಿಪೇರಿ	0.260	0.156	,,
57	,,	,, ತೂಬು ಕಾಲುವೆ ರಿಪೇರಿ	0.250	0.10	,,
58	ಶಾಂತಿ ಗ್ರಾಮ	ತಟ್ಟೀಕೆರೆ ದೊಡ್ಡ ಕೆರೆ ದುರಸ್ತಿ	0.235	0.121	,,

1	2	3	4	5	6
59	ಕಸಬಾ	ಕೋಡಿಹಳ್ಳಿ ಕೆರೆ ಏರಿ ದುರಸ್ತಿ	0.250	0.205	2702 ಯೋಜನೇತರ
60	ಕಟ್ಟಾಯ	ಕಬ್ಬತ್ತಿ ಬೀರದೇವರ ಕಟ್ಟೆ ಫೀಡರ್ ಚಾನಲ್ ಮತ್ತು ರಿವೆಟ್‌ಮೆಂಟ್ ದುರಸ್ತಿ	0.165	0.163	,,
61	ಶಾಂತಿ ಗ್ರಾಮ	ದುಮ್ಮಿಗೆರೆ ಬಿಳಿಮಣ್ಣಿನಕಟ್ಟೆ ದುರಸ್ತಿ	0.245	0.222	,,
62	ಕಸಬಾ ಕಿ.	ಗಾಡೇನಹಳ್ಳಿ ಗೈಡ್‌ವಾಲ್ ನಿರ್ಮಾಣ	0.235	0.279	,,
63	ಶಾಂತಿ ಗ್ರಾಮ	ಜಾಗರವಳ್ಳಿ ಚಾನಲ್ ಗೈಡ್‌ವಾಲ್‌ದುರಸ್ತಿ	0.25	0.097	,,
64	ಕಸಬಾ	ಯರೇಹಳ್ಳಿಹೊಡಕೆಕಟ್ಟೆ ತೂಬು ದುರಸ್ತಿ	0.24	0.33	,,
65	ಕಟ್ಟಾಯ	ಬ್ಯಾಡದಹಳ್ಳಿ ದೊಡ್ಡಕೆರೆ ತೂಬು ದುರಸ್ತಿ	0.15	0.152	,,
66	ಕಸಬಾ	ಬಿದಿರೆ ಕೆರೆ ಜಂಗಲಿ ಕಟ್ಟೆ ದುರಸ್ತಿ	0.20	0.188	,,
67	ಕಸಬಾ	ಪೆರುಮೆನಹಳ್ಳಿ ಕೆರೆ ಹುರಸ್ತಿ	0.10	0.082	,,
68	ಕಟ್ಟಾಯಕಿ	ಜವೇನಹಳ್ಳಿ ಸಣ್ಣಕೆರೆ ತೂಬು ದುರಸ್ತಿ	0.15	0.08	,,
69	ಕಸಬಾ	ಚಿಕ್ಕಕೊಲಡುಗುಳ ಊರಮುಂದಿನ ಕೆರೆ ಅಭಿವೃದ್ಧಿ	0.20	0.154	,,
70	,,	ತಮ್ಲಾಪುರ ಆನೆಕೆರೆ ದುರಸ್ತಿ	0.20	0.132	,,
71	ಶಾಂತಿ ಗ್ರಾಮ	ಅಲದಹಳ್ಳಿ ಗರಿಕೆಟ್ಟೆಯ ತೂಬು ಪುನರ್ ನಿರ್ಮಾಣ	0.20	0.08	,,
72	ಅಂಬುಗ	ಅಂಬುಗ ದೊಡ್ಡಕೆರೆ ಗೈಡ್‌ವಾಲ್ ನಿರ್ಮಾಣ	0.30	0.048	,,
			ಒಟ್ಟು :	9.131	

ಶ್ರೀ ಕೆ. ಹೆಚ್. ಹನುಮೇಗೌಡ :– ಸುಮಾರು 72 ಕೆರೆ ರಿಪೇರಿ ಮಾಡಿರುವ ಲಿಸ್ಟ್ ಕೊಟ್ಟಿದ್ದೀರಿ. ಇದರಲ್ಲಿ ಪದೇ ಪದೇ ಅದೇ ಕೆರೆಗಳ ರಿಪೇರಿಯಾಗಿರುವುದು ಕಂಡುಬಂದಿದೆ. ನಾನು ಪ್ರಶ್ನೆ ಕೊಟ್ಟ ಉದ್ದೇಶ ಒಂದು ಸಲಕ್ಕೆ ಕನಿಷ್ಟ ಒಂದು ಕೆರೆಯದಾದರೂ ತೂಬೊ ಏರಿಯೋ ರಿಪೇರಿಯಾಗಲಿ, ಮುಂದಿನ ಸಲಕ್ಕೆ ಬೇರೆ ತೆಗೆದುಕೊಳ್ಳಲಿ ಎಂದು. ಆದರೆ ಇಲ್ಲಿ ಎರಡು ಮೂರು ವರ್ಷವೂ ಅದೇ ಕೆರೆ, ಅದೇ ರಿಪೇರಿ ಎಂದು ಕೊಟ್ಟರೆ ಅರ್ಥವೇನು ? ಕನಿಷ್ಟ ಎಷ್ಟು ಕೆರೆಗಳು ಪೂರ್ತಿ ರಿಪೇರಿಯಾಗಿದೆ ಹೇಳುವಿರಾ ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ :– ಯಾವ ಕೆರೆ ಎಷ್ಟು ವರ್ಷದಿಂದ ರಿಪೇರಿಯಾಗುತ್ತದೆ ಎಂಬುದು ಆಲ್ಲಿನ ಪರಿಸ್ಥಿತಿ ವಾಸ್ತವಾಂಶವನ್ನನುಸರಿಸುವ ವಿಚಾರ. ಮಣ್ಣಿನ ಕೆಲಸವಾದರೆ ಬೇಗ ರಿಪೇರಿಗೆ ಬರುತ್ತದೆ. ಆದ್ದರಿಂದ ಯಾವ ಕೆರೆ ಯಾವ ಕೆಲಸ ಎಂಬದು ಸ್ಪಷ್ಟವಾಗಿ ಕೇಳಿ, ಉತ್ತರಿಸುವೆನು.

ಶ್ರೀ ಕೆ. ಹೆಚ್. ಹನುಮೇಗೌಡ :– ಉದಾಹರಣೆ ಕೊಡುತ್ತೇನೆ. ಕ್ರಮಸಂಖ್ಯೆ 21, ಕವಟ್ಟಿ ಕೆರೆ 25 ಸಾವಿರ, ಕ್ರಮಸಂಖ್ಯೆ 35, ಅದೇ ಕೆರೆ ತೂಬು ರಿಪೇರಿಗೆಂದು 25 ಸಾವಿರ ಆಲ್ಲಿಗೆ ಎರಡು ಸಲ ಒಂದೇ ಕೆರೆ. ಇದು ಸರ್ವೇಸಾಧಾರಣವಾಗಿ ನಡೆಯುತ್ತದೆ. ಇದಕ್ಕೆ ನನ್ನ ಸಲಹೆ ಏನೆಂದರೆ ಒಂದು ತಾಲೂಕಿನಲ್ಲೋ, ಕ್ಷೇತ್ರ ದಲ್ಲೋ ಎಷ್ಟು ಕೆರೆ ಇದೆಯೆಂದು ಮಾಹಿತಿ ಸಂಗ್ರಹಿಸಿ ಒಂದು ಪ್ರೋಗ್ರಾಂ ಹಾಕಿ ರಿಪೇರಿ ಮಾಡಿ ಮುಗಿಸಿದರೆ ಸರಿಹೋಗುತ್ತದೆ. ಆದರೆ ಈಗ ಎರಡು ಮೂರು ವರ್ಷಗಳ ಕಾಲ ಒಂದೇ ಕೆರೆ ರಿಪೇರಿಗೆ ಹಣ ಹೋಗುತ್ತದೆ. ಆದ್ದರಿಂದ ಕನಿಷ್ಟ ಒಂದು ಪ್ರೋಗ್ರಾಮನ್ನು ಚಾಕೌಟ್ ಮಾಡಿ ಇದನ್ನು ಮಾಡಿ ಮುಗಿಸುವಿರಾ ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೆ, ಪದೇ ಪದೇ ಒಂದು ಕೆಲಸವನ್ನು ನಾವು ತೆಗೆದು ಕೊಂಡು ನಾವು ಪದೇ ಪದೇ ಮಾಡಿಬಿಟ್ಟರೆ ಖರ್ಚು ಜಾಸ್ತಿ ಬರುತ್ತದೆ ಎನ್ನತಕ್ಕಂಥ ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಕೆಲವು ಸಾರಿ ಏನಾದರೂ ಮಳೆ ಜಾಸ್ತಿಯಾಗಿ ಅಥವಾ ಕೆಲವು ಅನ್ಯಾಯ ಮಾಡಿದ್ದರಿಂದ ಒಂದೇ ಕೆಲಸವನ್ನು ಎರಡು ಬಾರಿ ತೆಗೆದುಕೊಂಡಿರತಕ್ಕಂಥ ಪ್ರಕರಣಗಳು ಒಂದ ರದಾದರೂ ಎಲ್ಲಿಯಾದರೂ ಇರಬಹುದು. ನಾನು ಇಲ್ಲ, ಎನ್ನತಕ್ಕಂಥ ಮಾತನ್ನು ಆಡಲಾರೆ. ಆದರೆ

ಆ ರೀತಿ ಆಗದಹಾಗೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳುತ್ತದೆ. ಇನ್ನು ಮೇಲೆ ಕೆಲಸವನ್ನು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ಹೆಚ್ಚಿನ ನಿಗಾವನ್ನು ಕೊಟ್ಟು ನಾವು ನೋಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮುಂದೆ ಆಗತಕ್ಕಂಥ ಕೆಲಸದ ಬಗ್ಗೆ ಮಾನ್ಯ ಸದಸ್ಯರು ಯಾವ ರೀತಿ ಹೇಗೆ ಎನ್ನತಕ್ಕಂಥ ಅಭಿಪ್ರಾಯವನ್ನು ಕೊಟ್ಟರೆ ನಾವು ಹೆಚ್ಚಿನ ನಿಗಾವನ್ನು ಕೊಟ್ಟು ಅದರ ಬಗ್ಗೆ ಕೆಲಸವನ್ನು ಮಾಡಿಸುವುದಕ್ಕೆ ನಾನು ಆದೇಶವನ್ನು ಕೊಡುತ್ತೇನೆ.

ವಿಷಯ :– ಕೋಲಾರ ಜಿಲ್ಲಾಪರಿಷತ್ ವ್ಯಾಪ್ತಿಗೆ ಬರುವ ರಸ್ತೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 9 (155)

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಎಷ್ಟು ಕಿ. ಮೀ. ರಸ್ತೆಗಳು ಬರುತ್ತದೆ ?

ಆ) ಅದರಲ್ಲಿ ಬಂಗಾರಪೇಟೆ ತಾಲ್ಲೂಕಿನಲ್ಲಿ ಎಷ್ಟು ಕಿ. ಮೀ. ರಸ್ತೆಗಳು ಜಿಲ್ಲಾ ಪರಿಷತ್‌ನ ವ್ಯಾಪ್ತಿಗೆ ಬರುತ್ತದೆ ?

ಇ) ಈ ರಸ್ತೆಗಳು ಶಿಥಿಲಗೊಂಡಿದ್ದು ಇವುಗಳನ್ನು ದುರಸ್ತಿಪಡಿಸಲು ಅಥವಾ ಮೇಲ್ದರ್ಜೆಗೇರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ?

ಈ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಇದಕ್ಕಾಗಿ ಹೆಚ್ಚುವಾಗಿರುವ ಹಣವೆಷ್ಟು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) 2807.70 ಕಿ. ಮೀ.ಗಳು.

ಆ) 252.40 ಕಿ. ಮೀ. ಗಳು.

ಇ) ಸದರಿ ರಸ್ತೆಗಳನ್ನು ಲಭ್ಯವಿರುವ ಜಿಲ್ಲಾ ಪರಿಷತ್ ಅನುದಾನದಲ್ಲಿ ನಿರ್ವಹಣೆ ಮಾಡುತ್ತಿದ್ದು 30.80 ಕಿ. ಮೀ. ಉದ್ದದ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಯಾಗಿ ಮೇಲ್ದರ್ಜೆಗೆ ಏರಿಸಲು ಪ್ರಸ್ತಾವನೆ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಜಿಲ್ಲಾ ಪರಿಷತ್‌ಗೆ ಸದರಿ ರಸ್ತೆಗಳನ್ನು 1987-88 ನೇ ಸಾಲಿನಲ್ಲಿ ವಹಿಸಲಾಗಿದ್ದು, ಇಲ್ಲಿಯವರೆಗೆ 22.62 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ಶ್ರೀ ಎಂ. ನಾರಾಯಣಸ್ವಾಮಿ :– ಮಾನ್ಯ ಸಭಾಧ್ಯಕ್ಷರೆ, ನಾನು ಕೇಳಿದ ಪ್ರಶ್ನೆ ಕೋಲಾರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಎಷ್ಟು ಕಿಲೋ ಮೀಟರ್ ರಸ್ತೆಗಳು ಬರುತ್ತವೆ ? ಇದಕ್ಕೆ ಉತ್ತರವಾಗಿ 2807.70 ಕಿಲೋ ಮೀಟರ್‌ಗಳು ಬರುತ್ತದೆ ಎಂದು ಹೇಳಿದ್ದಾರೆ. ನಾನು ಇದರಲ್ಲಿ ನನ್ನ ಕ್ಷೇತ್ರವಾದ ಬಂಗಾರುಪೇಟೆ ತಾಲ್ಲೂಕಿನಲ್ಲಿ ಎಷ್ಟು ಕಿಲೋಮೀಟರ್ ರಸ್ತೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ ಎಂದಿದ್ದಕ್ಕೆ ಉತ್ತರವಾಗಿ 252.40 ಕಿಲೋ ಮೀಟರ್‌ಗಳು ಬರುತ್ತದೆ ಎಂದು ಹೇಳಿದ್ದಾರೆ. ಆದರೆ ನಾನು ಮೂರನೆಯ ಪ್ರಶ್ನೆಯನ್ನು ಕೇಳಿದ್ದರಲ್ಲಿ "ಈ ರಸ್ತೆಗಳು ಶಿಥಿಲಗೊಂಡಿದ್ದು ಇವುಗಳನ್ನು ದುರಸ್ತಿ ಪಡಿಸಲು ಅಥವಾ ಮೇಲ್ದರ್ಜೆಗೇರಿಸಲು ಕ್ರಮಗಳನ್ನು ಕೈಕೊಳ್ಳಲಾಗಿದೆಯೇ ?" ಎಂದಿದ್ದಕ್ಕೆ ಉತ್ತರವಾಗಿ ಸದರಿ ರಸ್ತೆಗಳನ್ನು ಲಭ್ಯವಿರುವ ಜಿಲ್ಲಾ ಪರಿಷತ್ ಅನುದಾನದಲ್ಲಿ ನಿರ್ವಹಣೆ ಮಾಡುತ್ತಿದ್ದು, 30.80 ಕಿಲೋ ಮೀಟರ್ ಉದ್ದದ ರಸ್ತೆಗಳನ್ನು ಜಿಲ್ಲಾ ಮುಖ್ಯರಸ್ತೆಯಾಗಿ ಮೇಲ್ದರ್ಜೆಗೆ ಏರಿಸಲು ಪ್ರಸ್ತಾವನೆ ಬಂದಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಆದರೆ 252.40 ಕಿಲೋ ಮೀಟರ್‌ನ್ನು ಯಾವಾಗ ದುರಸ್ತಿ ಮಾಡುತ್ತೀರಿ ಎಂದು ಕೇಳಿದಕ್ಕೆ ಬರೀ 30.80 ಕಿಲೋ ಮೀಟರ್ ಮಟ್ಟಿಗೆ ದುರಸ್ತಿಯನ್ನು ಅಥವಾ ಮೇಲ್ದರ್ಜೆಗೇರಿಸುತ್ತೇವೆ ಎಂದು ಹೇಳಿದಾರೆ. ಮಿಕ್ಕಿದ್ದನ್ನು ಯಾವಾಗ ಮಾಡುತ್ತೀರಿ. ಇದರ ಬಗ್ಗೆ ಏನು ದುರಸ್ತಿ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದು ಒಂದು. ಎರಡನೆಯದೆಂದರೆ ಹಾಗಿದ್ದಲ್ಲಿ ಇಲ್ಲಿಯವರೆಗೂ ಆದಕ್ಕಾಗಿ ಹೆಚ್ಚಾಗಿರುವ ಹಣ ಎಷ್ಟು ಎಂದು ಹೇಳಿದರೆ 252.40 ಕಿಲೋ ಮೀಟರ್ 87–88, 88–89, 89–90, 90–91 ರ ಸಾಲಿಗೆ ಬರೀ ಕೇವಲ 22.62 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವನ್ನು ಪೂರ್ಣಗೊಳಿಸಿ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ರಸ್ತೆಗಳು ಬೇರೆ ಕಡೆಯಲ್ಲಿ ಹಾಳಾದ ಹಾಗೆ ಅಲ್ಲಿಯೂ ಕೂಡಾ ಹೆಚ್ಚಾಗಿ ಹಾಳಾಗಿದೆ ಎನ್ನತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ. ಕೋಲಾರದಲ್ಲಿ ಕೆಲವು ಕಡೆ ಮಳೆ ಬಾರದೇ ಇದ್ದಂಥ ಸಂದರ್ಭದಲ್ಲಿ